ಇ) ಹಾಗಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮ ಏನು?

ಶ್ರೀ ಕೆ.ಹೆಚ್. ರಂಗನಾಥ್(ಅರಣ್ಯ,ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಹೌದು.

ಆ) ಹೌದು.

ಇ) ಹುಣಸೂರು ಪಟ್ಟಣದಲ್ಲಿ ಕೊಳಚೆ ನೀರು ಮತ್ತು ಚರಂಡಿ ನೀರಿನ ಶುದ್ಧೀಕರಣ ಸೌಲಭ್ಯಗಳು ಇಲ್ಲದಿರುವುದರಿಂದ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪುರಸಭೆಗೆ ಅಗತ್ಯವಾದ ಸೌಲಭ್ಯಗಳನ್ನು ಒದಗಿಸುವಂತೆ ನೋಟೀಸನ್ನು ಜಾರಿಮಾಡಿರುತ್ತದೆ.

ಹುಣಸೂರು ತಾಲ್ಲೂಕಿನಲ್ಲಿ ಟಿಪ್ಪಣಿ ಇಲ್ಲದ ಗ್ರಾಮಗಳು

1249(1956) ಶ್ರೀ ಪಾಪಣ್ಣ ವಿ.(ಹುಣಸೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಣಸೂರು ತಾಲ್ಲೂಕಿನಲ್ಲಿ ಕಂದಾಯ ಗ್ರಾಮದ ಟಿಪ್ಪಣಿ ಇಲ್ಲದೆ ಇರುವ ಕಾವಲ್ ಜಮೀನುಗಳು ಯಾವುವು?

ಆ) ಈ ಕಂದಾಯ ಗ್ರಾಮಗಳಿಗೆ ಟಿಪ್ಪಣಿ ಇಲ್ಲದೆ ಇರುವುದರಿಂದ ರೈತರಿಗೆ ಕರಾರುವಕ್ಕಾಗಿ ಜಮೀನು ಅನುಭವ ತೋರಿಸುವುದು ಕಷ್ಟವಲ್ಲವೆ?

ಇ) ಹಾಗಿದ್ದಲ್ಲಿ, ಈ ಗ್ರಾಮಗಳ ಜಮೀನು ಟಿಪ್ಪಣಿ ತಯಾರಿಸಲು ತೊಂದರೆ ಏನು?

ಈ) ಸರ್ಕಾರ ಈ ಕಂದಾಯ ಭೂಮಿಗಳಿಗೆ ಟಿಪ್ಪಣಿ ಮಾಡಿಸಲು ಯಾವ ರೀತಿ ಕಾರ್ಯಕ್ರಮ ಹಾಕಿಕೊಂಡಿದೆ?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು):

ಅ) ಹುಣಸೂರು ತಾಲ್ಲೂಕಿನಲ್ಲಿ 9 ಗ್ರಾಮಗಳಲ್ಲಿ ಟಿಪ್ಪಣಿ ಇಲ್ಲದೆ ಇರುವ 11 ಕಾವಲು ಸರ್ವೆ ನಂಬರು ಜಮೀನು ಇರುತ್ತದೆ.

ಆ) ಹೌದು

ಇ) ಈ ಜಮೀನುಗಳು ಸರ್ಕಾರಿ ಜಮೀನುಗಳಾದ್ದರಿಂದ (ಈ ಹಿಂದೆ ಮೈಸೂರು ಸಂಸ್ಥಾನಕ್ಕೆ ಸೇರಿದ ಕಾವಲು ಜಮೀನು ಆಗಿದ್ದು, ಮೇವಿಗಾಗಿ ಕಾಯ್ದಿರಿಸಿದ ಜಮೀನಾಗಿರುತ್ತದೆ) ಈ ಹಿಂದಿನ ಸರ್ವೆ ಕಾಲದಲ್ಲಿ ಸರ್ಕಾರಿ ಗೋಮಾಳ ಕಾವಲು ಮುಂತಾದ ಜಮೀನುಗಳ ಟಿಪ್ಪಣಿಗಳನ್ನು ತಯಾರಿಸಿರುವುದಿಲ್ಲ.

ಎರಡು ಗ್ರಾಮದಲ್ಲಿ ಮಾತ್ರ ಮಂಜೂರಾತಿ ಕಡತ ಸ್ವೀಕೃತವಾಗಿದ್ದು ಶೀಘ್ರ ವಿಲೇವಾರಿಯ ಬಗ್ಗೆ ಕ್ರಮ ಜರುಗಿಸಲಾಗುತ್ತಿದೆ. ಉಳಿದ ಗ್ರಾಮಗಳ ಮಂಜೂರಿ ಕಡತ ಬಂದ ಕೂಡಲೇ ಕ್ರಮ ತೆಗೆದುಕೊಳ್ಳಲಾಗುವುದು.

ಈ) ಸರ್ಕಾರಿ ಖರಾಬ್ : ಕಾವಲ್ ಜಮೀನುಗಳನ್ನು ಭೂ ಮಂಜೂರಾತಿ ಮಾಡಿದ ನಂತರ ಸರ್ವೆ ಇಲಾಖೆಯ ವತಿಯಿಂದ ಅಳತೆ ಮತ್ತು ನಕ್ಷೆ ಮಾಡಲು ಕ್ರಮ ಕೈಗೊಂಡು ಅಂತಹ ಜಮೀನುಗಳಿಗೆ ಸವಿಸ್ತಾರ ಟಿಪ್ಪಣಿಗಳನ್ನು ಮಾಡಲಾಗುವುದು

ಭೂಮಿ ಕಾರ್ಯಕ್ರಮವನ್ನು ಪಂಚಾಯತ್ ರಾಜ್ ಇಲಾಖೆಯೊಂದಿಗೆ ಹೊಂದಾಣಿಕೆ ಮಾಡಿ ಗಣಕೀಕರಣ ಗೊಳಿಸುವುದು

1250(731) ಶ್ರೀ ಪಾಟೀಲ್ ಡಿ.ಆರ್. (ಗದಗ್)) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?